# ಸಮಯ ಕಡಿಮೆ ಇದ್ದರೂ ಸರ್ವರಿಗೂ ಚರ್ಚೆಗೆ ಅವಕಾಶ

**ವಿಶಿಷ್ಟ ಸಂದರ್ಭದ ಬಜೆಟ್ ಅಧಿವೇಶನದಲ್ಲಿ ಮೇಲ್ಮನೆ ಸ್ಪೀಕರ್ ಬಸವರಾಜ ಹೊರಟ್ಟಿಯವರು ಸದನ ಮಾತ್ರವಲ್ಲ, ಇಡೀ ಶಕ್ತಿಕೇಂದ್ರದ (ವಿಧಾನಸೌಧದ) ದಾಖಲೆಯ ಸಾಕ್ಷಿಭಾವ. ಈ ಬಾರಿ ಸಭಾಪತಿ ಎದುರು ಕಾಲಾವಕಾಶದ ಸವಾಲಿದೆ. ಇದನ್ನು ಹೇಗೆ ನಿರ್ವಹಿಸಲಾಗುವುದು? ಬಜೆಟ್ ಕಲಾಪ ನಡೆಯಬೇಕಾದ ರೀತಿಯ ಕುರಿತು ತಮ್ಮ ಅನಿಸಿಕೆಗಳೇನು ಎಂಬುದನ್ನು ಬಸವರಾಜ ಹೊರಟ್ಟಿ 'ಸಂಯುಕ್ತ ಕರ್ನಾಟಕ'ಕ್ಕೆ ನೀಡಿದ ವಿಶೇಷ ಸಂದರ್ಶನದಲ್ಲಿ ವಿವರಿಸಿದ್ದಾರೆ.**

**• ಚರ್ಚೆಗೆ ಸಮಯವೇ ಇಲ್ಲದ ಈ ಸ್ಥಿತಿಯಲ್ಲಿ ಹೇಗೆ ನಿಭಾಯಿಸುವಿರಿ?**
ನನ್ನ ಅನುಭವವೇ ಇದಕ್ಕೆ ಸಹಕಾರಿಯಾಗಲಿದೆ. ಪ್ರಸಕ್ತ ವರ್ಷದ ಬಜೆಟ್ ಚರ್ಚೆಗೆ ಕಡಿಮೆ ಸಮಯ ದೊರೆಯಲಿದೆ. ಮಾತನಾಡಬೇಕೆಂಬ ಸದಸ್ಯರ ಸಂಖ್ಯೆ ಸಹಜವಾಗಿ ಹೆಚ್ಚಿರುತ್ತದೆ. ಆದ್ದರಿಂದ ಎಲ್ಲರಿಗೂ ಅವಕಾಶ ದೊರೆಯುವಂತೆ ಯೋಜನೆ ರೂಪಿಸಿದ್ದೇನೆ. ಬಜೆಟ್ ಕುರಿತು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿ, ಅಂಗೀಕಾರಕ್ಕೆ ಮುನ್ನ ಸರ್ಕಾರಕ್ಕೆ ಸಲಹೆ ನೀಡಲು ಪ್ರತಿಯೊಬ್ಬ ಸದಸ್ಯರಿಗೂ ಅವಕಾಶ ದೊರೆಯಲಿದೆ.

**• ನಿಮ್ಮ ಪ್ರಕಾರ ಬಜೆಟ್ ಚರ್ಚೆಗೆ ಕನಿಷ್ಠ ಎಷ್ಟು ದಿನ ಬೇಕು?**
ಹದಿನೈದು ದಿನಗಳಾದರೂ ಪೂರ್ಣ ಪ್ರಮಾಣದಲ್ಲಿ ಮೇಲ್ಮನೆಗೆ ಲಭಿಸಬೇಕು. ಆದರೆ ಸರ್ಕಾರ ನಿಗದಿ ಮಾಡಿದಂತೆ ಲಭಿಸುವ ಸಮಯದಲ್ಲೇ ಹೊಂದಿಸಿಕೊಳ್ಳುವುದು ನಮ್ಮ ಜಾಣ್ಮೆಯನ್ನು ಅವಲಂಬಿಸಿದೆ. ಈ ಬಾರಿ ಪ್ರತಿದಿನ ಬೆಳಗ್ಗೆ 10.30ಕ್ಕೇ ಸದನ ಆರಂಭಿಸಿ ರಾತ್ರಿಯವರೆಗೆ ನಡೆಸಿದರೆ ಈ ಹೊಂದಾಣಿಕೆ ಕಷ್ಟವೇನಲ್ಲ.

**• ಎಲ್ಲರಿಗೂ ಅವಕಾಶ ದೊರೆಯಬೇಕಾದರೆ ಕಾಲಾವಧಿ ಹೆಚ್ಚಬೇಕಲ್ಲವೇ?**
ನಿಸ್ಸಂಶಯವಾಗಿ. ಬೆಳಗ್ಗೆಯಿಂದ ರಾತ್ರಿಯವರೆಗೆ ಚರ್ಚಿಸಲೂ ಅವಕಾಶ ನೀಡುವೆ. ಬಜೆಟ್ ಮಂಡನೆಯಾದ ನಂತರ ಸದನಕ್ಕೆ ಈ ಕೆಲಸ ಬಿಟ್ಟರೆ ಇನ್ನ್ಯಾವ ಮಹತ್ವದ ಕೆಲಸ ಇರುತ್ತದೆ ಹೇಳಿ. ಆದ್ದರಿಂದ ನಾಲ್ಕೂ ದಿನ ಎಷ್ಟೇ ಹೊತ್ತಾಗಲಿ ಎಲ್ಲರಿಗೂ ಚರ್ಚೆ ಹಾಗೂ ಸರ್ಕಾರಕ್ಕೂ ಅದು ಬಯಸುವಷ್ಟು ವೇಳೆ ಉತ್ತರ ಕೊಡುವುದಕ್ಕೆ ಅವಕಾಶ ದೊರೆಯಲಿದೆ. ಚುನಾವಣೆ ಸಮೀಪಿಸಿರುವುದು ಅಥವಾ ಇನ್ನಿತರ ರಾಜಕೀಯ ಅಂಶಗಳು ಬಜೆಟ್‌ಗೆ ಅಡ್ಡಿ ಪಡಿಸಲಾರವು. ಏಕೆಂದರೆ ರಾಜ್ಯದ ಬಜೆಟ್ ಎಂದರೆ ಮಾಸಿಕ ಕುಟುಂಬ ನಿರ್ವಹಣೆಗೆ ವೇತನವನ್ನು ಸರಿಯಾಗಿ ವಿಂಗಡಿಸುವುದು ಹಾಗೂ ಚರ್ಚಿಸಿ ಮನೆ ಖರ್ಚು ಮಾಡುವಂತೆ ಅಲ್ಲವೇ?

**• ಬಜೆಟ್ ಚರ್ಚೆಯ ಗುಣಮಟ್ಟಗಳು ಮೊದಲು ಹೇಗಿದ್ದವು?**
ನನ್ನ ಅನುಭವದ ಪ್ರಕಾರ, ಇಪ್ಪತ್ತೊಂದನೇ ಶತಮಾನ ಕಾಲಿಡುವುದಕ್ಕೆ ಪೂರ್ವದಲ್ಲಿ ಬಜೆಟ್ ಚರ್ಚೆಗಳು ತುಂಬ ಗಹನವಾಗಿರುತ್ತಿದ್ದವು. ಸದನದಲ್ಲಿ ಕೂತಿರುತ್ತಿದ್ದ ನಾವು ನೈಸರ್ಗಿಕ ಕರೆಯಂತಹ ಅನಿವಾರ್ಯತೆಗೆ ಎದ್ದು ಹೋದರೂ ತರಾತುರಿಯಲ್ಲಿ ಒಳಬಂದು ಕೂರುತ್ತಿದ್ದೆವು. ಆಗ ಅಂತಹ ವಿಶ್ಲೇಷಕರಿದ್ದರು. ತಾವು ಎತ್ತಿಕೊಂಡ ಬಜೆಟ್‌ನ ಅಂಶಗಳಿಗೆ ಕೇಂದ್ರೀಕರಿಸಿ ಮಾತನಾಡುತ್ತಿದ್ದರು. ಓರ್ವ ಶಾಸಕ ಕೈಗೆತ್ತಿಕೊಂಡ ವಿಷಯವನ್ನು ಇನ್ನೋರ್ವ ಚರ್ಚೆಗೆ ಎತ್ತಿಕೊಳ್ಳುತ್ತಿರಲಿಲ್ಲ.

ಅಷ್ಟೇ ಏಕೆ? ಒಬ್ಬರು ಹೇಳಿಯಾಗಿದೆ ಎಂದರೆ ಇನ್ನೊಬ್ಬರು ಸಾಂದರ್ಭಿಕವಾಗಿಯೂ ಪುನರುಕ್ತಿ ಮಾಡುತ್ತಿರಲಿಲ್ಲ. ಇದರಿಂದ ಸದನದ ಸಮಯ ಉಳಿಯುತ್ತಿತ್ತು. ಅಷ್ಟೇ ಅಲ್ಲ, ಕಲಾಪದ ಘನತೆ ಮೇಲುಮಟ್ಟದಲ್ಲಿ ಉಳಿಯುತ್ತಿತ್ತು. ಬಜೆಟ್ ಮೇಲಿನ ಚರ್ಚೆಯ ವೇಳೆ, ಶಿಕ್ಷಣ, ಕಾರ್ಮಿಕ ಕಲ್ಯಾಣ ಹಾಗೂ ಕೃಷಿಗೆ ಸಂಬಂಧಿಸಿದ



ಚಿಂತನ ಮಂಥನಗಳಿಂದ ಪರಿಹಾರಗಳು ಹೊರಹೊಮ್ಮುತ್ತಿದ್ದವು. ಆರ್ಥಿಕವಾಗಿ ಎಷ್ಟು ಹಣ ದೊರಕಿದೆ ಎನ್ನುವುದರಷ್ಟೇ ಪರಿಹಾರವೂ ಮುಖ್ಯವಾಗುವುದರಿಂದ ಈ ಚರ್ಚೆಗಳಿಗೆ ಇನ್ನಿಲ್ಲದ ಆದ್ಯತೆ ಇರುತ್ತಿತ್ತು.

**• ಈಗ ಗುಣಮಟ್ಟ ಕುಸಿತವಾಗಿದೆಯೇ? ಆಗಿದ್ದರೆ ಕಾರಣವೇನು?**
ಹಾಗೇನಿಲ್ಲ. ಈಗಲೂ ಸಾಕಷ್ಟು ಓದಿದವರು ಮತ್ತು ವಿಷಯ ತಿಳಿದುಕೊಂಡು ಮಾತನಾಡುವವರು ಇದ್ದಾರೆ. ಆದರೆ ಇಂಥವರ ಸಂಖ್ಯೆ ಕಡಿಮೆಯಾಗಿರುವುದು ನೋವಿನ ವಿಷಯ. ನವಶತಮಾನದಲ್ಲಿ ರಾಜಕೀಯ ಛಾಯೆಗೇ ಹೆಚ್ಚು ಒತ್ತು ದೊರೆಯುತ್ತಿರುವುದು ಇದಕ್ಕೆ ಕಾರಣ ಇರಬಹುದು ಎಂದುಕೊಂಡಿರುವೆ.

ಬಹುತೇಕರು ಇಡೀ ಬಜೆಟ್ ಪುಸ್ತಕದಲ್ಲಿ ಏನಿದೆ ಎಂಬುದನ್ನು ಅಷ್ಟಾಗಿ ಗಮನಿಸುತ್ತಿಲ್ಲ. ಬಜೆಟ್ ಕೆಳಮನೆಯಲ್ಲಿ ಓದಿ ಮುಗಿದಿರುವುದಿಲ್ಲ, ಅಷ್ಟರ ಒಳಗೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಲು ಮುಗಿಬೀಳುವ ಪ್ರವೃತ್ತಿ ಹೆಚ್ಚುತ್ತಿದೆ. ಇದರ ಮುಂದುವರಿದ ಭಾಗ ಬಜೆಟ್ ಮೇಲಿನ ಚರ್ಚೆಯ ವೇಳೆಯೂ ಕಂಡು ಬರುವಂತಾಗಿದೆ. ಇದು ನಿಲ್ಲಲಿ ಎಂಬುದೇ ನನ್ನ ಕಳಕಳಿ. ಸಂಸದೀಯ ನಡವಳಿಕೆಗಳ ಬಗೆಗಿನ ಕಾಳಜಿ. ಮುಂಗಡಪತ್ರ ಅತೀ ಗಂಭೀರ ವಿಷಯ ಎನ್ನುವುದನ್ನು ಎಲ್ಲ ಶಾಸಕ ಸಹೋದ್ಯೋಗಿಗಳೂ ಅರ್ಥ ಮಾಡಿಕೊಳ್ಳಲಿ.

**• ಸರ್ಕಾರದಿಂದ ಮೇಲ್ಮನೆ ಚರ್ಚೆಗೆ ಗಂಭೀರ ಉತ್ತರ ಬರಬಹುದೇ?**
ಖಂಡಿತ ಬರುತ್ತದೆ ಎಂಬುದು ನನ್ನ ಅನಿಸಿಕೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಚರ್ಚೆಗಳನ್ನು ಗಂಭೀರವಾಗಿ ಆಲಿಸಿ, ಸಮಾಧಾನಕರ ಉತ್ತರ ಕೊಡುತ್ತಾರೆ; ನಂತರ ಪರಿಷತ್ತು ಅಂಗೀಕಾರದ ಮುದ್ರೆ ನೀಡುತ್ತದೆ ಎಂಬುದು ನನ್ನ ಖಚಿತ ಭಾವನೆ.

### ಬಜೆಟ್ ಅಂದ್ರೆ ಬಜೆಟ್ ಅಷ್ಟೇ...

**ಸರ್ಕಾರ ಬದಲಾದಲ್ಲಿ ಆಯವ್ಯಯವನ್ನು ತಿರಸ್ಕರಿಸಿ ಹೊಸದನ್ನು ಮಂಡಿಸುವ ಅವಕಾಶ ಇದೆಯಲ್ಲವೇ? ಇದ್ದರೆ ಇದು ಸರಿಯೇ?**

ಬಹುತೇಕರು ಈ ವಿಷಯವನ್ನು ತಪ್ಪಾಗಿ ಗ್ರಹಿಸಿದ್ದಾರೆ. ಯಾವುದೇ ಸರ್ಕಾರ ಪೂರ್ಣ ಪ್ರಮಾಣದ ಬಜೆಟ್ ಮಂಡನೆ ಮಾಡಿತೆಂದರೆ, ಅದನ್ನು ಪುನಃ ಒಂದು ವರ್ಷ ಬದಲಿಸಲು ನಿಯಮಾವಳಿಯಲ್ಲಿ ಅವಕಾಶ ಇಲ್ಲ. ಏಕೆಂದರೆ ಸದನ ಆಸ್ತಿ ಇದಾಗಿರುತ್ತದೆ. ಆದರೆ ಬಜೆಟ್‌ಗೆ ಹೆಚ್ಚುವರಿ ಅಂಶಗಳನ್ನು ಸೇರ್ಪಡೆ ಮಾಡಿಕೊಳ್ಳುವ ಅವಕಾಶಗಳು ಮುಕ್ತವಾಗಿರುತ್ತವೆ. ಈ ಅವಕಾಶದ ದುರ್ಲಾಭ ಆಗಬಾರದು ಅಷ್ಟೇ. ಹಾಗೆಯೇ ನಿಯಮಾವಳಿಗಳನ್ನು ತಿದ್ದುಪಡಿ ಮಾಡಿಕೊಂಡು ಅಥವಾ ಬದಿಗಿರಿಸಿ ಒಂದು ಸರ್ಕಾರದ ಬಜೆಟ್‌ಅನ್ನು, ಚುನಾವಣೆ ನಂತರ ಬೇರೆ ಸರ್ಕಾರ ಬಂದಲ್ಲಿ ಬದಲಿಸುವುದೂ ಸರಿಯಾದ ನಡೆಯಲ್ಲ. ಏಕೆಂದರೆ ಬಜೆಟ್ ಅಂದ್ರೆ ಬಜೆಟ್ ಅಷ್ಟೇ.